
ಪದಬಂಧ




ಎಡದಿಂದ ಬಲಕ್ಕೆ:

1. ಆಸೆಗಳೆಲ್ಲ ನೆರವೇರಲೆಂಬ ಬಯಕೆಯೂ ಆಸೆಯೇ ಅಲ್ಲವೇ? (3)
3. ಹಾವಿನ ಬೆನ್ನೇರಿ ತಲುಪಿದ ಊರು ಉಂಟೇ? (3)
4. ಶುದ್ಧವಾದದ್ದನ್ನ ಕೊಳ್ಳಲು ಭಾರೀ ಹುಡುಕಾಟ (3)
6. ಎಲ್ಲರೂ ಸುಮ್ಮನಾದದ್ದಕ್ಕೆ ಕಾರಣ 'ಒಳ್ಳೆಯ ಸದ್ದು' (3)
7. ಕಠೋರವೆಂಬಂಥ ಹೆಸರಿನ ಪಂಚತಂತ್ರದ ಪ್ರಾಣಿ (4)
9. ಮಾರುತ್ತಿರುವವನ ಕೂಗು ಮತ್ತೆ ಕೇಳಿಸುತ್ತಿದೆ ನೋಡಿ (4)
11. ತುಣುಕಿನ ಹುಡುಕಾಟವೆಂದರೆ ತುಂಬ ಕಷ್ಟ (4)
13. ಭರತನ ಶಿರದಲ್ಲೇ ಇದೆಂಥ ತೂಕ! (4)
15. ನೆನ್ನೆ ಕೇಳಿದ ಪುರಾಣ ಕಥೆಯದೇ ಮತ್ತೆ ಮತ್ತೆ ಸ್ಮರಣೆ (3)
17. ಕುಳ್ಳಗಿರುವ ಯಾರಿಗೂ ಪ್ರವೇಶ ಮೇಲಿಲ್ಲ (3)
18. ಕಳ್ಳರಿಗೆ ಪ್ರಿಯವಾದ ಕಪ್ಪು ಬಣ್ಣ (3)
19. ತಾಳಿ, ತಾಳಿ. ಇಲ್ಲಿ ಬೇಕಾದದ್ದು ಬರೀ ಚಿಗುರು (3)

ಮೇಲಿಂದ ಕೆಳಕ್ಕೆ:

1. ತಯಾರಿಸುವ ಕೆಲಸಕ್ಕೆ ತಕ್ಕವರನ್ನು ಆಯ್ಕೆ ಮಾಡು (3)
2. ಆಶಾದಾಯಕ ಭರವಸೆ ನೀಡಿದವಳು ಕೃಷ್ಣನ ಮಾತೆ (3)
3. ಬರೀ ಹರಟೆಯಲ್ಲೇ ಗಾಳಿಯಲ್ಲಿ ತೇಲುವ ಆಟ (3)
5. ನೆರವಿತ್ತವರ ಮನ ತುಂಬ ಸೂಕ್ಷ್ಮ (3)
7. ಮೂರು ಕತ್ತಿಗಳನ್ನೂ ಕಣ್ಮರೆ ಮಾಡಿದ ಕೈ ಚಳಕ (4)
8. ಅಲ್ಲಿ ಊಟಕ್ಕೆ ಕುಳಿತವರ ಜೊತೆ ಕದ್ದು ಮುಚ್ಚಿ ಬಂದವರ ಗುಂಪಿದೆ (4)
9. ಮಡಿಯುವಂತಾದರೂ ಸರಿ, ಸದಾಚಾರ ಬಿಡದವ (4)
10. ಆತ ದಾನವೀರನೆಂಬ ಭಾವನೆ ಬರೀ ಊಹಾಪೋಹ (4)
12. ಕಣ್ಣು ಸರಿಮಾಡಿಸಲಿಕ್ಕೆ ಅಷ್ಟಿಷ್ಟು ಧನ ಸಹಾಯವೇ? (3)
14. ಕೂಲಿಗೆಂದು ಹಂಚಲಾದ ಹಣದ ದಾಖಲೆ ಬರೆವವ ಎಲ್ಲಿ? (3)
15. ಗೆಲ್ಲುತ್ತೇನೆಂದು ಭಾವಿಸಿಯೇ ಹೀಗೆ ಜಿಗಿತ (3)
16. ಪರಕೀಯರು ಬಂದಿದ್ದಾರೆಂಬುದು ಬರೀ ಗಾಳಿ ಸುದ್ದಿ (3)

## 24-4-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸದಾಕಾಲ; 3. ಸಹರ; 4. ಕುಹಕ; 6. ದಿಟ್ಟತನ; 7. ಜನಕ; 9. ಗಣನೆ; 11. ರಿವಾಜು; 13. ಹಮಾಲ (=ಹಮಾಲಿ); 15. ಹಸ್ತಾಂತರ; 17. ವದನ; 18. ಕಾಜಾಣ; 19. ನಷ್ಟಕರ.

ಮೇಲಿಂದ ಕೆಳಕ್ಕೆ:

1. ಸರದಿ; 2. 'ಲಕುನ' (ನಕುಲ ತಲೆ ಕೆಳಗು); 3. ಸಜ್ಜನ; 5. ಕಠಿಣ; 7. ಜನವರಿ; 8. ಕರಬೂಜ (=ಕರಬೂಜ); 9. ಗಹಗಹ; 10. ನೆಲಬಲ; 12. ವಾಸ್ತವ; 14. ಮಾರಣ; 15. ಹನನ; 16. ರಕಾರ.

## ಪ್ರಶ್ನಾ ೦ಕಣ


# ಯಾವ ಹಕ್ಕಿ ಪರಮ ದೈತ್ಯ?

ಅದು ಯಾವುದೇ ಆಗಿರಲಿ, ಒಂದಂಶ ಸ್ಪಷ್ಟ: ಖಗ ಜಗದಲ್ಲಿ ದೈತ್ಯ ಗಾತ್ರ ಅಪರೂಪ. ಏಕೆಂದರೆ ಬೃಹದ್ಗಾತ್ರ ಹಾರಾಟಕ್ಕೆ ಸೂಕ್ತವಲ್ಲ. ಆದ್ದರಿಂದಲೇ ಹಕ್ಕಿಗಳದೆಲ್ಲ ಸರಿಸುಮಾರು ಸಾಧಾರಣ ಗಾತ್ರ; ವಾಸ್ತವವಾಗಿ ಪುಟ್ಟ ಪ್ರಭೇದಗಳೇ ಅತ್ಯಧಿಕ.

ಹಾಗಿದ್ದರೂ ಪಕ್ಷಿ ಸಾಮ್ರಾಜ್ಯದಲ್ಲಿ ಕೆಲವಾರು ದೈತ್ಯ ಪ್ರಭೇದಗಳು ಹಿಂದೆಯೂ ಇದ್ದುವು, ಈಗಲೂ ಇವೆ. ಶರೀರ ಗಾತ್ರದಲ್ಲೂ, ದೇಹ ತೂಕದಲ್ಲೂ 'ಹಕ್ಕಿಗಳಿಗೊಪ್ಪದ' ಭಾರೀ ಅಳತೆಗಳನ್ನು ಪಡೆದ ಅಂತಹ ಪ್ರಭೇದಗಳೆಲ್ಲ ಸಹಜವಾಗಿಯೇ ಹಾರದ ಹಕ್ಕಿಗಳೇ ಆಗಿರಬೇಕೆಂಬುದು ಸ್ಪಷ್ಟ ತಾನೇ? (ಕೆಲವಾರು ಚಿಕ್ಕ ಗಾತ್ರದ ಖಗ ಪ್ರಭೇದಗಳೂ ಇತರ ವಿಶೇಷ ಕಾರಣಗಳಿಂದ ಹಾರಾಟವನ್ನು ತ್ಯಜಿಸಿವೆ). ಪಕ್ಷಿ ಪ್ರಪಂಚದಲ್ಲಿ ಗರಿಷ್ಠ ಗಾತ್ರದ, ಗರಿಷ್ಠ ತೂಕದ ವಿಶ್ವ ದಾಖಲೆಯ ಹಿಂದಿನ ಮತ್ತು ಈಗಿನ ಪರಮ ದೈತ್ಯರು ಇವು:

ಮೋವಾ: ನ್ಯೂಜಿಲ್ಯಾಂಡ್‌ನಲ್ಲಿ ಈಗ್ಗೆ ಏಳುನೂರು ವರ್ಷ ಹಿಂದಿನವರೆಗೂ ಹೇರಳ ಸಂಖ್ಯೆಯಲ್ಲಿ ನೆಲಸಿದ್ದ 'ಮೋವಾ' (ಚಿತ್ರ-1 ನೋಡಿ) ಹಕ್ಕಿದೇ ಬೃಹದ್ಗಾತ್ರದ, ಅತ್ಯಂತ ಎತ್ತರದ ಶರೀರದ ವಿಶ್ವದಾಖಲೆ. ವಿಧ ವಿಧ ಹನ್ನೊಂದು ಪ್ರಭೇದಗಳಿದ್ದ ಮೋವಾಗಳ ಒಂದು ಪ್ರಭೇದದ್ದು ಹನ್ನೆರಡು ಅಡಿ ಎತ್ತರ, ಇನ್ನೂರೈವತ್ತು ಕಿಲೋಗ್ರಾಂ ತೂಕ! ಸಂಪೂರ್ಣ ಸಸ್ಯಾಹಾರಿಯಾಗಿದ್ದ ಈ ಪರಮ ದೈತ್ಯ ಹಕ್ಕಿ ನ್ಯೂಜಿಲ್ಯಾಂಡ್‌ಗೆ ಮನುಷ್ಯರು ಹೆಜ್ಜೆ ಇರಿಸಿದ ಕೇವಲ ಒಂದು ನೂರು ವರ್ಷಗಳಲ್ಲಿ ಅವರಿಗೇ ಆಹಾರವಾಗಿ ನಿರ್ನಾಮವಾಯಿತು.

ಥಂಡರ್ ಬರ್ಡ್: ಆಸ್ಟ್ರೇಲಿಯದಲ್ಲಿ ಈಗ್ಗೆ ಎಂಟು ದಶಲಕ್ಷ ವರ್ಷ




ಹಿಂದಿನವರೆಗೆ ನೆಲೆಸಿದ್ದ ಮತ್ತೊಂದು ದೈತ್ಯ ಹಕ್ಕಿ 'ಥಂಡರ್ ಬರ್ಡ್'ನದು ಅತ್ಯಧಿಕ ದೇಹ ತೂಕದ ಸಾರ್ವಕಾಲಿಕ ವಿಶ್ವದಾಖಲೆ. ಹತ್ತಡಿ ಎತ್ತರದ ಈ ಹಕ್ಕಿಗಳ ಶರೀರ ತೂಕ ಐದುನೂರು ಕಿಲೋಗ್ರಾಂ!

ಆಸ್ಟ್ರಿಚ್: ಖಗ ಜಗದ ಪ್ರಸ್ತುತದ ಅತ್ಯಂತ ದೈತ್ಯ ಹಕ್ಕಿ 'ಆಸ್ಟ್ರಿಚ್' (ಚಿತ್ರ-2). ಈ ಹಕ್ಕಿಯ ನೈಸರ್ಗಿಕ ನೆಲೆ ಆಫ್ರಿಕ ಖಂಡ. ಎಂಟು ಅಡಿ ಎತ್ತರ, ಒಂದು ನೂರ ಅರವತ್ತು ಕಿಲೋ ತೂಕದ ಶರೀರದ ಈ ಹಕ್ಕಿಯದೇ ಗಾತ್ರ ತೂಕ ಎತ್ತರ ಮೂರರಲ್ಲೂ ಪಕ್ಷಿ ಪ್ರಪಂಚದ ಜೀವಂತ ವಿಶ್ವದಾಖಲೆ. ತಾಸಿಗೆ ಎಪ್ಪತ್ತು ಕಿ.ಮೀ. ಓಡುವ ಈ ಹಕ್ಕಿ 'ಗರಿಷ್ಠ ವೇಗದ ದ್ವಿಪಾದಿ' ಎಂಬ ವಿಶ್ವದಾಖಲೆಯನ್ನೂ ಸ್ಥಾಪಿಸಿದೆ. ಮೊಟ್ಟೆ ಗಾತ್ರದಲ್ಲೂ (ಪ್ರತಿ ಮೊಟ್ಟೆಯಾದೂ ಹನ್ನೆರಡು ಕೋಳಿ ಮೊಟ್ಟೆಗಳ ಒಟ್ಟು ಗಾತ್ರಕ್ಕೆ ಸಮ) ಇದರದೇ ಈಗಿನ ತ್ರಿವಿಕ್ರಮ ದಾಖಲೆ.

■ ಎನ್. ವಾಸುದೇವ್